KARN320023592022

LATHA SHREE B V

Digitally signed by LATHA SHREE B V
Date: 2026.08.01 12:16:15 +0530

Presented on : 19-05-2022
Registered on : 19-05-2022
Decided on : 27-07-2026
Duration : 4 years, 2 months, 8 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಕನಕಪುರ.**

**ತೀರ್ಪಿನ ದಿನಾಂಕಃ 27ನೇ ಜುಲೈ 2026**

<u>**ಉಪಸ್ಥಿತರು**</u>

**ಶ್ರೀಮತಿ. ಲತಾಶ್ರೀ ಬಿ.ವಿ.,** ಬಿ.ಎ., ಎಲ್ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು,
ಕನಕಪುರ.

<u>**ಕ್ರಿಮಿನಲ್ ಪ್ರಕರಣ ಸಂಖ್ಯೆಃ 1487/2022**</u>

ಫಿರ್ಯಾದಿದಾರರು : ಹಾರೋಹಳ್ಳಿ ಪೊಲೀಸ್ ಠಾಣೆ, ಕನಕಪುರ.
(ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

ಆರೋಪಿತರು

1 ವೆಂಕಟೇಶ್ ಬಿನ್ ವೆಂಕಟಪ್ಪ,
ವಯಸ್ಸು 53 ವರ್ಷ,

2 ಸುಂದರಮ್ಮ ಕೋಂ ವೆಂಕಟೇಶ್,
ವಯಸ್ಸು 37 ವರ್ಷ

3 ಹರ್ಷ ಬಿನ್ ವೆಂಕಟೇಶ್,
ವಯಸ್ಸು 20 ವರ್ಷ,

4 ಹರ್ಷಿತಾ ಬಿನ್ ವೆಂಕಟೇಶ್,
ವಯಸ್ಸು 19 ವರ್ಷ,

ಎಲ್ಲರ ವಾಸಃ ಹೊನ್ನಾಲಗನದೊಡ್ಡಿ ಗ್ರಾಮ,
ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು

(ಶ್ರೀ ಎಸ್.ಪಿ.ಕೆ., ವಕೀಲರು)

| | | |
|---|---|---|
| 1 | ಪ್ರಕರಣದ ದಿನಾಂಕ | 16.01.2022 |
| 2 | ಪ್ರಕರಣದ ವರದಿಯ ದಿನಾಂಕ | 16.01.2022 |
| 3 | ಫಿರ್ಯಾದಿಯ ಹೆಸರು | ಶ್ರೀಮತಿ ಸುಶೀಲಮ್ಮ |
| 4 | ಸಾಕ್ಷ್ಯ ದಾಖಲೆ ಪ್ರಾರಂಭವಾದ ದಿನಾಂಕ | 10.07.2026 |
| 5 | ಸಾಕ್ಷ್ಯ ದಾಖಲೆ ಮುಕ್ತಾಯವಾದ ದಿನಾಂಕ | 16.07.2026 |
| 6 | ದೂರು ನೀಡಿರುವ ಅಪರಾಧ | ಭಾ.ದಂ.ಸಂ. ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರಂತೆ |
| 7 | ನ್ಯಾಯಾಧೀಶರ ಅಭಿಪ್ರಾಯ | ಭಾ.ದಂ.ಸಂ. ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರನ್ವಯ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಷಿಯೆಂದು ಆದೇಶಿಸಲಾಗಿದೆ. |
| 8 | ಫಿರ್ಯಾದಿಯ ಪರವಾಗಿ | ಮಾನ್ಯ ಸ.ಸ.ಅ. |
| 9 | ಆರೋಪಿಗಳ ಪರವಾಗಿ | ಶ್ರೀ ಎಸ್.ಪಿ.ಕೆ., ವಕೀಲರು |

**ಸಹಿ/-**
**(ಶ್ರೀಮತಿ. ಲತಾಶ್ರೀ ಬಿ.ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಕನಕಪುರ.**

**<u>ತೀರ್ಪು</u>**

ಹಾರೋಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು, ಕನಕಪುರ ಇವರು ಆರೋಪಿತರ ವಿರುದ್ಧ ಅಪರಾಧಿಕ ಪ್ರಕರಣಗಳಾದ ಭಾ.ದಂ.ಸಂ. ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ಆರೋಪಿಸಿ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿರುತ್ತಾರೆ.

**2.** **<u>ಪ್ರಕರಣದ ಸಂಕ್ಷಿಪ್ತ ವಿವರ ಈ ಕೆಳಗಿನಂತೆ ಇರುತ್ತದೆ:-</u>**

ದಿನಾಂಕ.16.01.2022 ರಂದು ಮಧ್ಯಾಹ್ನ ಸುಮಾರು 13:30 ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹೊನ್ನಾಲಗನದೊಡ್ಡಿ ಗ್ರಾಮದಲ್ಲಿ 1ನೇ ಆರೋಪಿ ಮತ್ತು ಚಾಸಾ-1/ಸುಶೀಲಮ್ಮ ರವರ ಗಂಡನ ಅಣ್ಣ ತಮ್ಮಂದಿರಾಗಿದ್ದು, ಅಣ್ಣ ತಮ್ಮಂದಿರಿಗೆ ಮನೆಯ ಭಾಗದ ವಿಚಾರದಲ್ಲಿ ವಿವಾದವಿದ್ದು, 1ನೇ ಆರೋಪಿಯು ಚಾಸಾ1 ಮತ್ತು ಅವರ ಮನೆಯವರ ಬಾತ್ ರೂಮಿಗೆ ಬಿಡದೆ ನೀರು ಹಿಡಿಯಲು ಬಿಡದೆ ತೊಂದರೆ ಕೊಟ್ಟು ಒಟ್ಟು ಕುಟುಂಬದ ಖಾಲಿ ಜಾಗದಲ್ಲಿ ಮನೆ ಕಟ್ಟಿಕೊಂಡು ಚಾಸಾ1 ರವರ ಮನೆಯವರಿಗೆ ತೊಂದರೆ ನೀಡುತ್ತಿದ್ದನ್ನು ಚಾಸಾ-1 ರವರು ಕೇಳಿದಕ್ಕೆ 1 ರಿಂದ 4ನೇ ಆರೋಪಿತರು ಏಕೊದ್ದೇಶದಿಂದ ಚಾಸಾ-1

ರವರ ಮನೆಯ ಬಳಿಗೆ ಹೋಗಿ ಜಗಳ ತೆಗೆದು 1ನೇ ಆರೋಪಿಯು ಚಾಸಾ। ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಚಾಸಾ-1 ರವರ ತಲೆಯ ಜುಟ್ಟು ಹಿಡಿದುಕೊಂಡು ಹೊರಗೆ ಎಳೆದುಕೊಂಡು ಬಂದು ಅವಮಾನ ಪಡಿಸಿದ್ದು ಹಾಗೂ 2ನೇ ಆರೋಪಿಯು ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿದ್ದು ಮತ್ತು 3ನೇ ಆರೋಪಿಯು ಚಾಸಾ-1 ರವರಿಗೆ ಕೈಗಳಿಂದ ಹೊಡೆಯುತ್ತಿದ್ದಾಗ ಚಾಸಾ-2 ರವರು ಜಗಳ ಬಿಡಿಸಲು ಬಂದಾಗ 1ನೇ ಆರೋಪಿಯು ಗರ್ಭಿಣಿಯಾದ ಚಾಸಾ-2 ರವರ ಹೊಟ್ಟೆಗೆ ಕಾಲಿನಿಂದ ಒದ್ದಿದ್ದರಿಂದ ಚಾಸಾ-2 ರವರಿಗೆ ಸಾದಾರಣಾ ಸ್ವರೂಪದ ಗಾಯವಾಗಿದ್ದು ಹಾಗೂ ಆರೋಪಿತರೆಲ್ಲರೂ ಚಾಸಾ-1 ಮತ್ತು 2 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಹಾಗಾಗಿ ಆರೋಪಿತರು ಭಾ.ದಂ.ಸಂ. ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಚಾಸಾ-1 ರವರು ಆರೋಪಿತರ ವಿರುದ್ದ ನೀಡಿದ ದೂರಿನಂತೆ ಹಾರೋಹಳ್ಳಿ ಠಾಣೆಯ ಆರಕ್ಷಕ ನಿರೀಕ್ಷಕರು, ಕನಕಪುರ ಇವರು ತನಿಖೆಯನ್ನು ಕೈಗೊಂಡು ಆರೋಪಿತರು ಮೇಲ್ಕಾಣಿಸಿದ ಅಪರಾಧಗಳನ್ನು ಮಾಡಿರುತ್ತಾರೆಂದು ಅವರ ವಿರುದ್ದ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ನ್ಯಾಯಾಲಯವು ಸಮನ್ಸ್ ನೀಡಿದ ಮೇರೆಗೆ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರ ಪ್ರಕಾರ ಅಭಿಯೋಜನಾ ಪ್ರಕರಣದ ಎಲ್ಲಾ ದಾಖಲೆಗಳ ನಕಲು ಪ್ರತಿಗಳನ್ನು ಆರೋಪಿತರಿಗೆ ನೀಡಿದ್ದು, ಆರೋಪಿತರ ವಿರುದ್ದ ಭಾ.ದಂ.ಸಂ. ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿದ್ದಾರೆಂದು ದೋಷಾರೋಪಣೆಯನ್ನು ತಯಾರಿಸಿ, ಅದನ್ನು ಆರೋಪಿತರಿಗೆ ಓದಿ ಹೇಳಲಾಗಿದ್ದು, ಅದರಲ್ಲಿರುವ ದೋಷಾರೋಪಣೆಯನ್ನು ಆರೋಪಿತರು ಒಪ್ಪಿಕೊಂಡಿರುವುದಿಲ್ಲ ಹಾಗೂ ವಿಚಾರಣೆ ನಡೆಸಲು ಬಯಸಿದ್ದರು, ನಂತರದಲ್ಲಿ ಅಭಿಯೋಜನೆಯು ಆರೋಪಿತರ ಮೇಲಿರುವ ದೋಷಾರೋಪಣೆಗಳನ್ನು ರುಜುವಾತು ಪಡಿಸಲು ಒಟ್ಟು 11 ಜನ ಸಾಕ್ಷಿಗಳಲ್ಲಿ 3 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿದ್ದು ಹಾಗೂ ಸದರಿ ಸಾಕ್ಷಿದಾರರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದ ಕಾರಣ, ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ, ನಿಪಿ.1 ರಿಂದ 3 ರ ದಾಖಲೆಯನ್ನು ಹಾಜರುಪಡಿಸಿ ನಿಶಾನೆಯನ್ನಾಗಿ ಗುರುತಿಸಿಕೊಂಡಿರುತ್ತಾರೆ. ಗಾಯಾಳು ಸಾಕ್ಷಿ ಮತ್ತು ಪ್ರತ್ಯಕ್ಷ ಸಾಕ್ಷಿದಾರರು ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿದಾರರಾದ ಪರಿಣಾಮ ಇನ್ನಿತರ ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವು ಯಾವುದೇ ರೀತಿಯ ಸಹಕಾರಿಯಾಗುವುದಿಲ್ಲವೆಂದು ಮನಗಂಡು ನ್ಯಾಯಾಲಯವು ಇತರೆ ಸಾಕ್ಷಿದಾರರನ್ನು ಕೈಬಿಟ್ಟಿರುತ್ತದೆ. ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆ ಆದನಂತರ ಅಭಿಯೋಜನಾ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ದ

ಯಾವುದೇ ಸಾಂದರ್ಭಿಕ ಸಾಕ್ಷ್ಯಗಳಿಲ್ಲದಿರುವುದರಿಂದ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿತರಿಗೆ ವಿಚಾರಣೆಯಲ್ಲಿ ವಿನಾಯತಿ ನೀಡಲಾಯಿತು ಹಾಗೂ ಆರೋಪಿತರು ತಮ್ಮ ಪರವಾಗಿ ಯಾವುದೇ ರೀತಿಯ ಸಾಕ್ಷ್ಯಗಳನ್ನು ಒದಗಿಸಿರುವುದಿಲ್ಲ.

4. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತರ ಪರ ವಕೀಲರ ವಾದ-ವಿವಾದಗಳನ್ನು ಕೇಳಲಾಯಿತು. ಈ ಕೆಳಗಿನ ಅಂಶಗಳು ಈ ನ್ಯಾಯಾಲಯದ ಗಣನೆಗೆ ಬರುತ್ತದೆ.

*1. ದಿನಾಂಕ.16.01.2022 ರಂದು ಮಧ್ಯಾಹ್ನ 13:30 ಗಂಟೆ ಸಮಯದಲ್ಲಿ, ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಹೊನ್ನಾಲಗನದೊಡ್ಡಿ ಗ್ರಾಮದಲ್ಲಿ 1ನೇ ಆರೋಪಿ ಮತ್ತು ಚಾಸಾ-1/ ಸುಶೀಲಮ್ಮ ರವರ ಗಂಡನ ಅಣ್ಣ ತಮ್ಮಂದಿರಾಗಿದ್ದು, ಅಣ್ಣ ತಮ್ಮಂದಿರಿಗೆ ಮನೆಯ ಭಾಗದ ವಿಚಾರದಲ್ಲಿ ವಿವಾದವಿದ್ದು, 1ನೇ ಆರೋಪಿಯು ಚಾಸಾ1 ಮತ್ತು ಅವರ ಮನೆಯವರಿಗೆ ಬಾತ್ ರೂಮಿಗೆ ಬಿಡದೆ ನೀರು ಹಿಡಿಯಲು ಬಿಡದೆ ತೊಂದರೆ ಕೊಟ್ಟು ಒಟ್ಟು ಕುಟುಂಬದ ಖಾಲಿ ಜಾಗದಲ್ಲಿ ಮನೆ ಕಟ್ಟಿಕೊಂಡು ಚಾಸಾ1 ರವರ ಮನೆಯವರಿಗೆ ನೀಡಿದ್ದು, ಚಾಸಾ.1 ರವರು ಈ ಬಗ್ಗೆ ಕೇಳಿದಾಗ 1 ರಿಂದ 4 ನೇ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರ ಮನೆಯ ಬಳಿಗೆ ಹೋಗಿ ಜಗಳ ತೆಗೆದು 1ನೇ ಆರೋಪಿಯು ಚಾಸಾ। ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿದ್ದು, ಹಾಗಾಗಿ ಆರೋಪಿತರು ಭಾ.ದಂ.ಸಂ. ಕಲಂ 448 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆರೋಪಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?*

*2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 1ನೇ ಆರೋಪಿಯು ಚಾಸಾ-1 ರವರ ತಲೆಯ ಜುಟ್ಟು ಹಿಡಿದುಕೊಂಡು ಹೊರಗೆ ಎಳೆದುಕೊಂಡು ಬಂದು ಅವಮಾನ ಪಡಿಸಿದ್ದು, ಹಾಗಾಗಿ ಆರೋಪಿತರು ಭಾ.ದಂ.ಸಂ. ಕಲಂ 354 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆರೋಪಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?*

*3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 2ನೇ ಆರೋಪಿಯು ಚಾಸಾ-1 ರವರ ಜುಟ್ಟು ಹಿಡಿದು ಎಳೆದಾಡಿದ್ದು, 3ನೇ ಆರೋಪಿಯು ಚಾಸಾ-1 ರವರಿಗೆ ಕೈಗಳಿಂದ ಹೊಡೆದಿದ್ದು, ಚಾಸಾ-2 ರವರು ಜಗಳ ಬಿಡಿಸಲು ಬಂದಾಗ 1ನೇ*

*ಆರೋಪಿಯು ಗರ್ಭಿಣಿಯಾದ ಚಾಸಾ.2 ರವರ ಹೊಟ್ಟೆಗೆ ಕಾಲಿನಿಂದ ಒದ್ದು ಸಾದಾರಣಾ ಸ್ವರೂಪದ ನೋವುಂಟು ಮಾಡಿದ್ದು, ಹಾಗಾಗಿ ಆರೋಪಿತರು ಭಾ.ದಂ.ಸಂ. ಕಲಂ 323 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆರೋಪಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?*

*4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 1ನೇ ಆರೋಪಿಯು ಚಾಸಾ.1 ಮತ್ತು 2 ರವರಿಗೆ ಬೋಳಿಮುಂಡೇರ ಸೂಳೆ ಮುಂಡೇರ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿದ್ದು, ಹಾಗಾಗಿ ಆರೋಪಿತರು ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆರೋಪಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?*

*5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 1 ಮತ್ತು 3ನೇ ಆರೋಪಿತರು ಚಾಸಾ.1 ರಿಂದ 3 ರವರಿಗೆ ಪೊಲೀಸ್ ಕಂಪ್ಲೇಟ್ ಕೊಟ್ಟರೆ ಕತ್ತರಿಸಿ ಹಾಕುವೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಹಾಗಾಗಿ ಆರೋಪಿತರು ಭಾ.ದಂ.ಸಂ. ಕಲಂ 506 ಸಹವಾಚಕ ಕಲಂ 34 ರ ಕಾಯ್ದೆಯಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆರೋಪಗಳನ್ನು ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?*

*6. ಯಾವ ಆದೇಶ?*

5. ಮೇಲೆ ಹೇಳಿದ ಅಂಶಗಳಿಗೆ ಮಾನ್ಯ ನ್ಯಾಯಾಲಯದ ಉತ್ತರ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶ-1 ರಿಂದ 5 | : | ನಕಾರಾತ್ಮಕ |
| ಅಂಶ-6 | : | ಅಂತಿಮ ಆದೇಶ, ಈ ಕೆಳಕಂಡಂತೆ ಕಾರಣಗಳಿಂದಾಗಿಃ |

## <u>ಕಾ ರ ಣ ಗ ಳು</u>

**6.** **<u>ಅಂಶ ಸಂಖ್ಯೆಃ 1 ರಿಂದ 5</u>**: ಈ ಮೇಲಿನ ಅಂಶಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾಸಾ.1 ರಿಂದ 3 ರವರ ಸಾಕ್ಷಿಯನ್ನು ಹಾಜರುಪಡಿಸಿರುತ್ತಾರೆ. ಪ್ರಾಸಾ-1 ರವರು ಗಾಯಾಳು ಸಾಕ್ಷಿ, ಪ್ರಾಸಾ-2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ. ಅಭಿಯೋಜಕರು ಗುರುತಿಸಿಕೊಂಡ ದಾಖಲೆಗಳಲ್ಲಿ ಪ್ರಾಸಾ-1 ರಿಂದ 3 ರವರ ಮೂಲಕ ಹೇಳಿಕೆಗಳನ್ನು ನಿಪಿ.1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

7. ಅಭಿಯೋಜನೆ ಪ್ರಕಾರ ಈ ಪ್ರಕರಣದ ಗಾಯಾಳು ಸಾಕ್ಷಿದಾರರಾದ ಚಾಸಾ-2 ರವರನ್ನು ಪ್ರಾಸಾ-1/ಅಪೂರ್ವ ಉಃ ಅಪರ್ಣ ಎಂದು ವಿಚಾರಣೆಗೊಳಪಡಿಸಿದ್ದು, ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ತನ್ನ ಹಾಗೂ ಚಾಸಾ-1 ತನ್ನ ತಾಯಿ ಹಾಗೂ ಚಾಸಾ-3 ರವರ ಮೇಲೆ ಯಾವುದೇ ರೀತಿ ಜಗಳ ತೆಗೆದು ಹಲ್ಲೆ ಮಾಡಿ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ಅದೇ ರೀತಿ ಚಾಸಾ-1ರವರ ಮಾನಕ್ಕೆ ಧಕ್ಕೆ ಉಂಟು ಮಾಡುವ ರೀತಿಯಲ್ಲಿ ನಡೆದುಕೊಂಡಿಲ್ಲ, ಈ ಸಂಬಂಧ ತನ್ನ ತಾಯಿ ಯಾವುದೇ ದೂರು ಕೊಟ್ಟಿಲ್ಲ, ತಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

8. ಅಭಿಯೋಜನೆ ಪ್ರಕಾರ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ರವರನ್ನು ಪ್ರಾಸಾ-2/ಕುಮಾರ್ ಎಂದು ವಿಚಾರಣೆಗೊಳಪಡಿಸಿದ್ದು, ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ತನ್ನ ಹಾಗೂ ಚಾಸಾ-2 ರವರ ಮೇಲೆ ಯಾವುದೇ ರೀತಿ ಜಗಳ ಮಾಡಿ ಹೊಡೆದು ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಹಾಗೂ ತಾನು ಈ ಸಬಂಧ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

9. ಅಭಿಯೋಜನೆ ಪ್ರಕಾರ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ರವರನ್ನು ಪ್ರಾಸಾ-3/ಸುದರ್ಶನ ಎಂದು ವಿಚಾರಣೆಗೊಳಪಡಿಸಿದ್ದು, ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ತಾನು ಯಾವುದೇ ಜಗಳವನ್ನು ನೋಡಿರುವುದಿಲ್ಲ, ತನ್ನ ಮೇಲೆ ಯಾವುದೇ ಹಲ್ಲೆಯಾಗಿಲ್ಲ ಯಾರೂ ಜೀವ ಬೆದರಿಕೆ ಹಾಕಿಲ್ಲ ಹಾಗೂ ತಾನು ಈ ಸಂಬಂಧ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

10. ಈ ಮೂಲಕ ಸದರಿ ಪ್ರಾಸಾ.1 ರಿಂದ 3 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿದಾರರಾಗಿದ್ದ ಕಾರಣ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಲು ನ್ಯಾಯಾಲಯದ ಅನುಮತಿ ಪಡೆದು, ಸದರಿ ಸಾಕ್ಷಿದಾರರು ಅಭಿಯೋಜನೆಯು ಪಾಟೀ ಸವಾಲು ಮಾಡಲಾಗಿ ಸದರಿ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಅಂಶಗಳನ್ನು ಸಾಕ್ಷಿದಾರರು ಅಲ್ಲಗಳೆದಿರುತ್ತಾರೆ. ಈ ಮೂಲಕ ಸದರಿ ಸಾಕ್ಷಿದಾರರು ಅಭಿಯೋಜನೆಗೆ ಪೂರ್ಣ ಪ್ರಮಾಣದ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಪ್ರಕರಣಕ್ಕೆ ಪೂರಕವಾಗಿ ಅನುಕೂಲವಾಗಿರುವುದಿಲ್ಲ.

11. ಮುಂದುವರೆದು, ಪ್ರಾಸಾ-1 ರವರು ಗಾಯಾಳು ಹಾಗೂ ಪ್ರಾಸಾ-2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಭಿಯೋಜನೆಯ ಪಕ್ಷವನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿರುವುದಿಲ್ಲ, ಘಟನೆಯ ಪ್ರಮುಖ ಸಾಕ್ಷಿದಾರರು ಅಭಿಯೋಜನೆಯ ವಾದವನ್ನು ಬೆಂಬಲಿಸದೇ ಪ್ರತಿಕೂಲ ಸಾಕ್ಷಿದಾರರಾಗಿ ಸಾಕ್ಷಿ ನುಡಿದ ಕಾರಣ, ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ

ಒಳಪಡಿಸಿದರೂ, ಅವರ ಸಾಕ್ಷ್ಯವು ಅಭಿಯೋಜನೆಗೆ ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾಧಗಳನ್ನು ಆರೋಪಿತರು ಮಾಡಿರುತ್ತಾರೆಂದು ಸಾಬೀತುಪಡಿಸಲು ಯಾವುದೇ ರೀತಿಯಿಂದಲೂ ಉಪಯೋಗವಾಗುವುದಿಲ್ಲವೆಂದು ನ್ಯಾಯಾಲಯವು ಮನಗಂಡು ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸದೇ ಕೈಬಿಡಲಾಗಿರುತ್ತದೆ ಮತ್ತು ಸದರಿ ಪ್ರಾಸಾ.1 ರಿಂದ 3 ರವರು ಹಾಗೂ ಆರೋಪಿತರು ಸದರಿ ಪ್ರಕರಣವನ್ನು ರಾಜೀ ಮಾಡಿಕೊಂಡಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆ ಕಾರಣಕ್ಕಾಗಿ ಪ್ರಾಸಾ.1 ರಿಂದ 3 ರವರು ಅಭಿಯೋಜನೆಯ ಪಕ್ಷವನ್ನು ಬೆಂಬಲಿಸಿ ಸಾಕ್ಷಿ ನುಡಿಯದೇ ಇರಬಹುದು ಎಂದು ಕಂಡು ಬರುತ್ತದೆ.

12. ಮುಂದುವರೆದು, ಪ್ರಾಸಾ-1 ರಿಂದ 3 ರವರು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯನ್ನು ನುಡಿದ ಕಾರಣ ಮತ್ತು ಪ್ರಾಸಾ-1 ರಿಂದ 3 ರವರು ಹಾಗೂ ಆರೋಪಿತರು ಸದರಿ ಪ್ರಕರಣವನ್ನು ರಾಜಿ ಮಾಡಿಕೊಂಡು ಹೇಳಿರುವ ಕಾರಣ, ಸದರಿ ಘಟನೆಯ ನೈಜತೆಯ ಬಗ್ಗೆ ಸಂಶಯ ಉಂಟಾಗುತ್ತದೆ ಮತ್ತು ಈ ಆಧಾರದ ಮೇರೆಗೆ ಯಾವುದು ಸತ್ಯ ಮತ್ತು ಯಾವುದು ಮಿಥ್ಯ ಎಂಬುದಾಗಿ ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಾಗುವುದಿಲ್ಲ. ಮುಂದುವರೆದು ಆರೋಪಿತರು ಸದರಿ ಅಪರಾಧಗಳನ್ನು ಮಾಡಿರುತ್ತಾರೆಂದು ಸಂಶಯಾತೀತವಾಗಿ ಪ್ರಾಸಾ.1 ರಿಂದ 3 ರವರ ಸಾಕ್ಷ್ಯದಿಂದ ಸಾಬೀತಾಗುವುದಿಲ್ಲ. ಆದ್ದರಿಂದ, ಆರೋಪಿತರು ತಪ್ಪಿತಸ್ಥರೆಂದು ತೀರ್ಮಾನಿಸುವುದು ಅಷ್ಟು ಸಮಂಜಸವಲ್ಲ. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ 3 ರವರ ಸಾಕ್ಷ್ಯದಿಂದ ಆರೋಪಿತರ ವಿರುದ್ಧ ಅಭಿಯೋಜನೆಯು ಮಾಡಿದ ಆರೋಪಗಳನ್ನು ಸಾಬೀತುಪಡಿಸಲು ಸಾಕಷ್ಟು ಸಾಕ್ಷಾಧಾರಗಳು ಲಭ್ಯವಿರುವುದಿಲ್ಲ. ಆದ್ದರಿಂದ, ಸಂಶಯದ ಲಾಭವು ಆರೋಪಿತರಿಗೆ ಸಲ್ಲತಕ್ಕದು.

13. ಸಾಕ್ಷಿದಾರರ ಸಾಕ್ಷ್ಯವನ್ನು ಮತ್ತು ಕಡತವನ್ನು ಪರಿಶೀಲಿಸಿದಾಗ ಅಭಿಯೋಜನಾ ಪಕ್ಷವು ಆರೋಪಿತರು ಪ್ರಾಸಾ-1 ರಿಂದ 3 ರವರಿಗೆ ದೋಷಾರೋಪಣೆಯಂತೆ ತೊಂದರೆ ಮಾಡಿರುತ್ತಾರೆ ಎನ್ನುವುದನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆಂದು ನಿರ್ಣಯಿಸಿ ಅಭಿಯೋಜನೆಯು ಆರೋಪಿತರ ಮೇಲೆ ಮಾಡಿರುವ ಭಾ.ದಂ.ಸಂ. ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ಅಪರಾಧಗಳನ್ನು ಎಸಗಿರುತ್ತಾರೆಂಬುದಾಗಿ ದೋಷಾರೋಪಣೆಗಳನ್ನು ರುಜುವಾತುಪಡಿಸಲು ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ***ಆದಕಾರಣ, ಅಂಶ-1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.***

**14.** **<u>ಅಂಶ ನಂ.6:</u>** ಅಂಶ 1 ರಿಂದ 5 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಆರೋಪಿತರು ಅನುಮಾನದ ಲಾಭವನ್ನು ಪಡೆದು, ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಅಭಿಪ್ರಾಯಪಡಲಾಗಿದೆ. ಆದುದ್ದರಿಂದ ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ 1 ರಿಂದ 4ನೇ ಆರೋಪಿತರ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ 323, 354, 448, 504 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

1 ರಿಂದ 4ನೇ ಆರೋಪಿತರ ಹಾಗೂ ಅವರ ಜಾಮೀನುದಾರರು ನೀಡಿರುವ ಜಾಮೀನು ಪತ್ರವನ್ನು ರದ್ದುಪಡಿಸಲಾಗಿದೆ.

(ನಾನು ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ದಿನಾಂಕಃ 18 ನೇ ಜುಲೈ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)

**ಸಹಿ/-**
**(ಶ್ರೀಮತಿ. ಲತಾಶ್ರೀ ಬಿ.ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ.ಗಳು, ಕನಕಪುರ.**

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ :-**

ಪ್ರಾಸಾ-1 : ಶ್ರೀಮತಿ ಅಪೂರ್ವ ಉಃ ಅಪರ್ಣ
ಪ್ರಾಸಾ-2 : ಶ್ರೀ ಕುಮಾರ್
ಪ್ರಾಸಾ-3 : ಶ್ರೀ ಸುದರ್ಶನ

**ಆರೋಪಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ :-**

-ಇಲ್ಲ-

**ಅಭಿಯೋಜನೆ ಪರ ಗುರುತು ಮಾಡಲಾದ ದಾಖಲೆಗಳ ಪಟ್ಟಿ :-**

ನಿಪಿ-1 : ಪ್ರಾಸಾ-1 ರವರ ಹೇಳಿಕೆ
ನಿಪಿ-2 : ಪ್ರಾಸಾ-2 ರವರ ಹೇಳಿಕೆ
ನಿಪಿ-3 : ಪ್ರಾಸಾ-3 ರವರ ಹೇಳಿಕೆ

**ಆರೋಪಿಗಳ ಪರ ಗುರುತು ಮಾಡಲಾದ ದಾಖಲೆಗಳ ಪಟ್ಟಿ :-**

-ಇಲ್ಲ-

**ಅಭಿಯೋಜಕರಿಂದ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿಃ**

-ಇಲ್ಲ-

**ಸಹಿ/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ.ಗಳು, ಕನಕಪುರ.**